ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಟಿಪ್ಪಣಿ ಹಾಳೆ

ವಿಷಯ ..... ಪುಟದ ಸಂಖ್ಯೆ -07-

..... ಕಡತದ ಸಂಖ್ಯೆ .....

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ಸಲ್ಲಿಸಿದೆ.

ವಿಷಯ: Construction of RCC drain in 5th, 6th and 7th cross roads in 1st main road at Ravindranagara, in Ward no. 13, in Shettyhalli sub-Division – ಆರ್.ಸಿ.ಸಿ ಚರಂಡಿಯ ಕಾಮಗಾರಿಯ 5ನೇ ಅಡ್ಡರಸ್ತೆಯ ಬದಲಾಗಿ 8ನೇ ಅಡ್ಡರಸ್ತೆಯಲ್ಲಿ ನಿರ್ಮಾಣ ಮಾಡಲು ಅನುಮೋದನೆ ಕೋರಿ.

ಉಲ್ಲೇಖ: ನಗರ ಪಾಲಿಕೆ ಸದಸ್ಯರು ನೀಡಿರುವ ಪತ್ರ.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ದಾಸರಹಳ್ಳಿ ವಲಯದ ಮಲ್ಲಸಂದ್ರ ವಾರ್ಡ್ ನಂ. 13ರ ವ್ಯಾಪ್ತಿಯಲ್ಲಿ ಬರುವ ರವೀಂದ್ರನಗರದ 1ನೇ ಮುಖ್ಯರಸ್ತೆಯ 5ನೇ, 6ನೇ ಹಾಗೂ 7ನೇ ಅಡ್ಡರಸ್ತೆಗಳಲ್ಲಿ ಆರ್.ಸಿ.ಸಿ ಚರಂಡಿ ನಿರ್ಮಾಣ ಮಾಡುವ ಕಾಮಗಾರಿಯ ಕೆಲಸದ ಅಂದಾಜು ಮೊತ್ತ ರೂ. 15.00 ಲಕ್ಷ ರೂಪಾಯಿಗಳಿಗೆ ಮಂಜೂರಾಗಿದ್ದು, ಅದರ ಜಾಬ್ ನಂಬರ್ 013-13-000013 ಆಗಿರುತ್ತದೆ. ಕಾಮಗಾರಿಯ ಕೆಲಸವನ್ನು ಗುತ್ತಿಗೆದಾರರಾದ ಶ್ರೀ. ತಿಪ್ಪೇಸ್ವಾಮಿ .ಎನ್ ರವರಿಗೆ ಇ-ಟೆಂಡರ್‌ನಂತೆ ಕಾಮಗಾರಿ ವಹಿಸಿ ಹಾಗೂ ಕರಾರು ಸಂಖ್ಯೆ: EE/DD/WO/51/2013-14, dated: 10/7/2013ರಂದು ವಹಿಸಿಕೊಡಲಾಗಿರುತ್ತದೆ.

ಸದರಿ ಕಾಮಗಾರಿಯೂ ಪ್ರಗತಿಯಲ್ಲಿದ್ದು, ವಾರ್ಡಿನ ಬಿಬಿಎಂಪಿ ಸದಸ್ಯರು ಸದ್ಯಕ್ಕೆ 8ನೇ ಅಡ್ಡರಸ್ತೆಯೂ ದುರಸ್ಥಿಯಲ್ಲಿದ್ದು, ಅಲ್ಲಿನ ಸಾರ್ವಜನಿಕರು ಕೋರಿರುವ ಮೇರೆಗೆ 5ನೇ ಅಡ್ಡರಸ್ತೆಯ ಬದಲಾಗಿ 8ನೇ ಅಡ್ಡರಸ್ತೆಯಲ್ಲಿ ಆರ್.ಸಿ.ಸಿ ಚರಂಡಿ ನಿರ್ಮಾಣ ಕಾಮಗಾರಿಯನ್ನು ಕೈಗೊಳ್ಳಬೇಕೆಂದು ಕೋರಿ ಪತ್ರವನ್ನು ನೀಡಿರುತ್ತಾರೆ.

ಆದುದರಿಂದ ಮೇಲ್ಕಂಡ ಕಾಮಗಾರಿಯನ್ನು ಮಾನ್ಯ ಪಾಲಿಕೆ ಸದಸ್ಯರು ಕೋರಿರುವ ಮೇರೆಗೆ ಹಾಗೂ ಸಾರ್ವಜನಿಕರು ಕೋರಿರುವ ಮೇರೆಗೆ 5ನೇ ಅಡ್ಡರಸ್ತೆಯ ಆರ್.ಸಿ.ಸಿ ಚರಂಡಿ ನಿರ್ಮಾಣ ಕಾರ್ಯವನ್ನು 8ನೇ ಅಡ್ಡರಸ್ತೆಯಲ್ಲಿ ನಿರ್ಮಾಣ ಮಾಡಲು ಅನುಮೋದನೆ ನೀಡಬೇಕೆಂದು ಈ ಮೂಲಕ ತಮ್ಮಲ್ಲಿ ಕೋರಲಾಗಿದೆ.

12-8-13

Rani. N.K.
ಸಹಾಯಕ ಕಾರ್ಯಪಾಲಕ ಅಭಿಯಂತರರು
ಶೆಟ್ಟಿಹಳ್ಳಿ ಉಪವಿಭಾಗ, ದಾಸರಹಳ್ಳಿ ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಎಸ್.ಎಂ ರಸ್ತೆ, ರವೀಂದ್ರನಗರ, ಬೆಂಗಳೂರು.

For Report

12/8/13

ವಿಷಯ :

ಪುಟದ ಸಂಖ್ಯೆ -10-

ಕಡತದ ಸಂಖ್ಯೆ .....

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ಸಲ್ಲಿಸಿದೆ,

ವಿಷಯ: Construction of RCC Drain in 5th, 6th & 7th cross roads in 1st main roads at Ravindranagara, in Ward No.13, in SSD.

ಅಂದಾಜು ಮೊತ್ತ ರೂ. 15.00 ಲಕ್ಷಗಳು

ಜಾಬ್ ಕೋಡ್ ಸಂಖ್ಯೆ: 013-13-000033 PCode-1771

Work Order No: EE/DD/WO/37/13-14, Dt:10.07.2013.

****

ಈ ಮೇಲ್ಕಂಡ ಕಾಮಗಾರಿಯನ್ನು Sri N Thippeswamy ರವರಿಗೆ ಟೆಂಡರ್ ಮುಖಾಂತರ ವಹಿಸಲಾಗಿದ್ದು, ಸದರಿ ಕಾಮಗಾರಿಯನ್ನು ವಾರ್ಡ್ ನಂ.13ರ ವ್ಯಾಪ್ತಿಯಲ್ಲಿ ಬರುವ ರವೀಂದ್ರನಗರ 1ನೇ ಮುಖ್ಯರಸ್ತೆಯ 5ನೇ, 6ನೇ ಮತ್ತು 7ನೇ ಅಡ್ಡರಸ್ತೆಗಳಲ್ಲಿ ಚರಂಡಿಯನ್ನು ದುರಸ್ಥಿಗೊಳಿಸಿ ಆರ್.ಸಿ.ಸಿ ಚರಂಡಿ ನಿರ್ಮಾಣ ಮಾಡಲು ಮಂಜೂರಾಗಿದ್ದು, ಸದರಿ ಕಾಮಗಾರಿಯನ್ನು ನಿರ್ವಹಿಸುವ ಸಮಯದಲ್ಲಿ ಸಾರ್ವಜನಿಕರು ಹಾಗೂ ಸ್ಥಳೀಯ ಪಾಲಿಕೆ ಸದಸ್ಯರು ಕೋರಿರುವ ಮೇರೆಗೆ 5ನೇ ಅಡ್ಡರಸ್ತೆಯಲ್ಲಿನ ಚರಂಡಿಯ ಬದಲಾಗಿ 8ನೇ ಅಡ್ಡರಸ್ತೆಯಲ್ಲಿನ ಚರಂಡಿಯು ಹೆಚ್ಚು ದುರಸ್ಥಿಯಲ್ಲಿರುವುದರಿಂದ, ಈ ಸ್ಥಳದಲ್ಲಿ ಆರ್.ಸಿ.ಸಿ ಚರಂಡಿ ನಿರ್ಮಾಣ ಕಾಮಗಾರಿಯನ್ನು ಕೈಗೊಳ್ಳಬೆಕೆಂದು ವಾರ್ಡ್ ನಂ.13ರ ಪಾಲಿಕೆ ಸದಸ್ಯರು ಪತ್ರವನ್ನು ನೀಡಿರುತ್ತಾರೆ.

ಆದುದರಿಂದ ಮಾನ್ಯ ಆಯುಕ್ತರ ರವರ ಸುತ್ತೋಲೆಯಂತೆ (ಆಯುಕ್ತರವರ ಕಛೇರಿ ಆದೇಶ ಪತ್ರ ಸಂಖ್ಯೆ:ಆ/ಪಿಆರ್/ಇಐಸಿ/ಎಫ್/1177/12-12, ದಿನಾಂಕ:23.01.2012)ರಂತೆ ರೂ.20.00 ಲಕ್ಷಗಳವರೆಗಿನ ಬದಲಿ ಕಾಮಗಾರಿಗಳನ್ನು ಮುಖ್ಯ ಅಭಿಯಂತರರಿಗೆ ಅಧಿಕಾರ ಪ್ರತ್ಯಾಯೋಜನೆ ಇರುತ್ತದೆ.

ಅದರಂತೆ ಕಂಡಿಕೆ.43ರಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು (ಶೆಟ್ಟಿಹಳ್ಳಿ ಉಪ ವಿಭಾಗ)ರವರು ಕೋರಿರುವಂತೆ ಮೇಲ್ಕಂಡ ಕಾಮಗಾರಿಯ 5ನೇ ಅಡ್ಡರಸ್ತೆಯ ಬದಲಾಗಿ 8ನೇ ಅಡ್ಡರಸ್ತೆಯಲ್ಲಿ ಚರಂಡಿ ನಿರ್ಮಿಸಲು ಪಾಲಿಕೆ ಸದಸ್ಯರು ಹಾಗೂ ಸಾರ್ವಜನಿಕರು ಕೋರಿರುವ ಮೇರೆಗೆ ಕಾಮಗಾರಿಯನ್ನು ನಿರ್ವಹಿಸುವುದು ಅವಶ್ಯಕತೆಯಿಂದ ಕೂಡಿರುವುದರಿಂದ ಆಯುಕ್ತರ ಸುತ್ತೋಲೆಯಂತೆ ಅನುಮೋದನೆ ಕೋರಲು ಕಡತವನ್ನು ಮುಖ್ಯ ಅಭಿಯಂತರರು (ದಾ.ವ)ರವರಿಗೆ ಸಲ್ಲಿಸಲು ಮಂಡಿಸಿದೆ.

ಕಾರ್ಯಪಾಲಕ ಅಭಿಯಂತರರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ದಾಸರಹಳ್ಳಿ ವಲಯ, ಬೆಂಗಳೂರು

ಮುಖ್ಯ ಅಭಿಯಂತರರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ದಾಸರಹಳ್ಳಿ ವಲಯ, ಬೆಂಗಳೂರು.

ಉಪ ಆಯುಕ್ತರು
ಬೃ. ಬೆಂ. ಮ. ಪಾಲಿಕೆ
ದಾಸರಹಳ್ಳಿ ವಲಯ, ಬೆಂ.-57